13

# ಕ್ರಿಸ್ತನ ದೇಹ

ಸಭೆಯನ್ನು ಚಿತ್ರಿಸುವದರಲ್ಲಿ ಪರಿಶುದ್ಧ ಬರಹಗಳು ಅನೇಕ ಪ್ರೇರೇಪಿತ ರೂಪಕಗಳನ್ನು ಉಪಯೋಗಿಸಿರುತ್ತವೆ. ಆ ಸಂಸ್ಥೆಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ರೂಪಕಗಳ ಮೇಲೆ ಆಧಾರಪಡುತ್ತೇವೆ. ಅವುಗಳಿಲ್ಲದೇ ನಾವು ಹೆಚ್ಚು ತಿಳಿದು ಕೊಳ್ಳಲಿಕ್ಕಾಗುವದಿಲ್ಲ. ಸಭೆಯನ್ನು ಚಿತ್ರೀಕರಿಸುವದಕ್ಕೆ ಸಹಾಯಕವಾಗಿ ಮಾನವ ದೇಹವನ್ನು ದೃಷ್ಟಾಂತವಾಗಿ ಆಯ್ಕೆ ಮಾಡಿದ್ದರಲ್ಲಿ ಹೆಚ್ಚು ಸರಳವಾದ ಮತ್ತು ಹೆಚ್ಚು ಆಳವಾದ ಉದಾಹರಣೆಯನ್ನು ಪ್ರೇರೇಪಣೆಯು ಆಯ್ದು ಕೊಂಡಂತೆ ತೋರುತ್ತದೆ. ಈ ಹೋಲಿಕೆಯಿಂದ ಮೂರು ಪ್ರಾಮುಖ್ಯವಾದ ಸತ್ಯಗಳು ಸೂಚಿಸಲ್ಪಟ್ಟಿವೆ.

## ಸಭೆಗೆ ಕ್ರಿಸ್ತನ ಸಂಬಂಧ

ಸಭೆಗೆ ಸಂಬಂಧಿಸಿ ಕ್ರಿಸ್ತನು ಶಿರಸ್ಸಾಗಿದ್ದಾನೆ. ಈ ರೂಪಕಾಲಂಕಾರವು ಎಫೆಸ 1:22, 23 ಮತ್ತು ಕೊಲೆಸ್ಸೆ 1:18, 24ರಲ್ಲಿ ಉಪಯೋಗಿಸಲ್ಪಟ್ಟಿದೆ. ಈ ವಾಕ್ಯಗಳು ಕ್ರಿಸ್ತನು ಶಿರಸ್ಸಾಗಿರುವನು ಎಂಬುದನ್ನು ಒತ್ತಿ ಹೇಳುತ್ತವೆ. ಅಷ್ಟೇ ಅಲ್ಲ, ಹೇಳಲ್ಪಟ್ಟ ಮೊದಲನೆಯದು ಆತನು ಯಾವಾಗ ಶಿರಸ್ಸಾದನು ಎಂದೂ ಹೇಳುತ್ತದೆ: ಅದು ಆತನ ಪುನರುತ್ಥಾನ ಹಾಗೂ ಮಹಿಮಾಸ್ಥಿತಿಗೆ ಏರಿಸಲ್ಪಟ್ಟ ತರುವಾಯ ಆಯಿತೆಂದು ಹೇಳುತ್ತದೆ. ಅನೇಕರು ವಾದಿಸಿದಂತೆ, ಸಭೆಯು ಕ್ರಿಸ್ತನ ಮರಣಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದರೆ, ಆಗ ಅದು ತಲೆಯಿಲ್ಲದ ದೇಹವಾಗುತ್ತಿತ್ತು. ಇದು ಸಭೆಯು ಅಬ್ರಹಾಮ ಇಲ್ಲವೇ ಸ್ನಾನಿಕನಾದ ಯೋಹಾನನ ದಿನಗಳಲ್ಲಿ ಸ್ಥಾಪಿಸಲ್ಪಟ್ಟಿತೆಂಬ ತಪ್ಪಾದ ವಿಚಾರಗಳನ್ನು ತಿರಸ್ಕರಿಸುತ್ತದೆ. ಈ ವಾಕ್ಯವು ಕ್ರಿಸ್ತನು ತನ್ನ ಪುನರುತ್ಥಾನದ ನಂತರ ಶಿರಸ್ಸಾದನು ಎಂಬುದನ್ನು ಬೋಧಿಸುತ್ತದೆ, ಮತ್ತು ಅದರಲ್ಲಿ ಹೆಚ್ಚು ಆಳವಾಗಿ ವಿಚಾರಿಸುವಾಗ, ಅದು ಆತನ ಪುನರುತ್ಥಾನದ ನಂತರ ಐವತ್ತನೆಯ ದಿನದ ನಂತರ ಅಂದರೆ ಪಂಚಾಶತ್ತಮ ದಿನದಂದು ಎಂದು ನಾವು ಕಲಿತುಕೊಳ್ಳುತ್ತೇವೆ (ಅಪೊಸ್ತಲರ ಕೃತ್ಯ 2). ಇದು ಸಭೆಯ ಜನನದ ದಿನವಾಗಿದೆ. ಆ ದಿನದಂದು ಕ್ರಿಸ್ತನು ಆ ದೇಹದ ಮೇಲೆ ತನ್ನ ಮಧ್ಯಸ್ತಿಕೆಯ ಆಳಿಕೆಯನ್ನು ಪ್ರಾರಂಭಿಸಿದನು.

ಕ್ರಿಸ್ತನ ಒಡೆತನವು ಆತನ ಆಳಿಕೆ ಮತ್ತು ಆಡಳಿತೆಯು ಅಧಿಕಾರ ಮತ್ತು ಆಡಳಿಕೆಯ ತತ್ವದ ಉತ್ತಮ ಮಾರ್ಗವನ್ನು ಸೂಚಿಸುತ್ತದೆ. ಮತ್ತಾಯ 28:18ರಲ್ಲಿ ಆತನು ಹೇಳಿಕೊಂಡಂತೆ ಆತನಿಗೆ ಎಲ್ಲಾ ಅಧಿಕಾರವಿರುವದನ್ನು ಅದು ಸೂಚಿಸುತ್ತದೆ. ಶಿರಸ್ಸಾಗಿ ಆತನು ಸಭೆಯ ಮೇಲೆ ಆಳಿಕೆ ಮಾಡುತ್ತಾನೆ. ಆಡಳಿತೆಯ ವಿಧಾನವು ನಿರಂಕುಶ ರಾಜ್ಯಪ್ರಭುತ್ವವಾಗಿದೆ.

ಈ ರಾಜ್ಯಪ್ರಭುತ್ವದ ಅದ್ವಿತೀಯ ಗುಣವು ಅದರ ಪರಿಪೂರ್ಣತೆಯಾಗಿದೆ. ಸಭೆಯ ಶಿರಸ್ಸು ಜ್ಞಾನದಲ್ಲಿಯೂ ಪ್ರೀತಿಯಲ್ಲಿಯೂ ಪರಿಪೂರ್ಣನಾಗಿದ್ದಾನೆ. ಆತನು

ಯಾವುದೇ ತಪ್ಪುಗಳನ್ನು ಮಾಡುವದಿಲ್ಲ. ಎಲ್ಲಾ ಧಾರ್ಮಿಕ ವಿಷಯಗಳಲ್ಲಿ ಅಧಿಕಾರದ ಅಂತಿಮ ಧ್ವನಿಯಾಗಿ ನಾವು ಆತನನ್ನು ನೋಡಬೇಕು. ನಾವು ಸಭೆಗೆ, ನಮ್ಮ ಮನಸ್ಸಾಕ್ಷಿಗಳಿಗೆ, ಮೋಶೆಗೆ ಇಲ್ಲವೇ ಸಾಂಪ್ರದಾಯಕ್ಕೆ ಹೋಗಬೇಕಾಗಿಲ್ಲ.

ಪೇತ್ರನು ಸಭೆಯ ಮುಖ್ಯಸ್ಥನಾಗಿದ್ದಾನೆಂದು ಸಿದ್ಧಪಡಿಸಿ ತೋರಿಸಲು ಪ್ರಯತ್ನಿಸಿದವನ ಲೇಖನಿಯಿಂದ ಬಂದ ಉದ್ದವಾದ ಚರ್ಚೆಯನ್ನು ನಾನು ಓದಿದೆನು. ಪೇತ್ರನು ಮತ್ತು ಆವನ ಉತ್ತರಾಧಿಕಾರಿಗಳು ಸಭೆಯ ಮುಖ್ಯಸ್ಥರಾಗಿದ್ದರೆಂದು ಸಿದ್ಧಪಡಿಸಿತೋರಿಸಲು ಅವನು ಆಳವಾದ ವಿವರಗಳನ್ನು ಕೊಡಲು ಪ್ರಯತ್ನಿಸಿದನು. ಅವನ ವಾದಗಳಲ್ಲಿ ಸಭೆಗೆ ಒಬ್ಬ ಮುಖ್ಯಸ್ಥನ ಅವಶ್ಯಕತೆಯಿದೆ. ಸಭೆಗೆ ಒಬ್ಬ ಮುಖ್ಯಸ್ಥನ ಅವಶ್ಯಕತೆಯಿರುವದನ್ನು ನಾವು ಅಲ್ಲಗಳೆಯುವದಿಲ್ಲ ಇಲ್ಲವೇ ಅದಕ್ಕೆ ಒಬ್ಬನಿರುವ ನೆಂಬುದನ್ನು ನಾವು ಅಲ್ಲಗಳೆಯುವದಿಲ್ಲ. ಹೀಗಿದ್ದರೂ ಕ್ರಿಸ್ತನ ಸಭೆಯ ಮೇಲೆ ಮಾನವನು ಮುಖ್ಯಸ್ಥನಾಗಿ ಇಡಲ್ಪಟ್ಟನೆಂಬುದನ್ನು ಅತೀ ಬಲವಾಗಿ ಅಲ್ಲಗಳೆಯುತ್ತೇವೆ. ಕ್ರಿಸ್ತನು ಮಾತ್ರವೇ ಶಿರಸ್ಸಾಗಿದ್ದಾನೆ. ಆತನು ತನ್ನ ಪ್ರೇರೇಪಿತ ರಾಯಭಾರಿಗಳ ಮುಖಾಂತರ ಮಾತಾಡಿದ್ದಾನೆ (2 ಕೊರಿಥ 5:20). ಆದರೆ ಅವರಿಗೆ ಯಾವುದೇ ಉತ್ತರಾಧಿಕಾರಿಗಳಿರಲಿಲ್ಲ.

ಕ್ರಿಸ್ತನು ಸಭೆಯ ಶಿರಸ್ಸಾಗಿರುವದನ್ನು ತಿಳಿದುಕೊಂಡು ಪ್ರತಿಯೊಬ್ಬ ವ್ಯಕ್ತಿಯು ಮನಸ್ಸಿನಲ್ಲಿ ಸಭೆಯನ್ನು ಮಹಿಮೆಪಡಿಸಬೇಕು. ಕ್ರಿಸ್ತನು ಶಿರಸ್ಸಾಗಿರುವ ಸಂಸ್ಥೆಯು ಗಣನೆಗೆ ಬಾರದಂಥದ್ದಾಗಿರುವದಿಲ್ಲ. ಆತನು ಶಿರಸ್ಸಾಗಿರುವನು ಎಂಬ ಸಂಗತಿಯೇ ಅದರ ಅತಿದೊಡ್ಡ ಮುಖ್ಯತ್ವವನ್ನು ತೋರಿಸುತ್ತದೆ. ಕ್ರಿಸ್ತನು ಶಿರಸ್ಸಾಗಿರುವ ದೇಹದ ಅಂಗವಾಗಿರುವುದು ಎಂಥಾ ಗೌರವವಾಗಿದೆಯಲ್ಲವೇ!

ತಲೆಯು ಭಾವನೆಯ ಮತ್ತು ಸಂವೇದನೆಯ ಕೇಂದ್ರವಾಗಿದೆ. ದೇಹಕ್ಕೆ ಮಾಡಲ್ಪಡು ವದೆಲ್ಲವೂ ಅಲ್ಲಿ ಅನುಭವವಾಗುತ್ತದೆ. ನಾವು ಸಭೆಯನ್ನು ಗೌರವಿಸುವಾಗ, ನಾವು ಅದರ ಶಿರಸ್ಸನ್ನು ಗೌರವಿಸುತ್ತೇವೆ ಮತ್ತು ನಾವು ಸಭೆಯನ್ನು ಅವಮಾನಗೊಳಿಸುವಾಗ ಅದರ ಶಿರಸ್ಸನ್ನು ಅವಮಾನಗೊಳಿಸುತ್ತೇವೆ. ಮತ್ತಾಯ 25, ನ್ಯಾಯವಿಚಾರಣೆಯ ದೃಶ್ಯವು ಹೇಳಿ ಕೆಯ ಮೊದಲಿನ ಭಾಗವನ್ನು ರುಜುವಾತು ಪಡಿಸುತ್ತದೆ. ಭೂಲೋಕದಲ್ಲಿ ಕ್ರಿಸ್ತನ ಸಹೋದ ರರಿಗೆ ಸೇವೆ ಮಾಡುವುದು ಆತನಿಗೆ ಸೇವೆ ಮಾಡಿದಂತೆ ಆಗುತ್ತದೆ. ಅಪೊಸ್ತಲರ ಕೃತ್ಯ 9:4 ರಲ್ಲಿಯ ಸೌಲನಿಗೆ ಹೇಳಿದ ಯೇಸುವಿನ ಮಾತುಗಳು ಅನಂತರದ ಭಾಗವನ್ನು ರುಜುವಾತು ಪಡಿಸುತ್ತವೆ; ಸಭೆಯನ್ನು ಹಿಂಸಿಸುವುದು ಕ್ರಿಸ್ತನನ್ನು ಹಿಂಸಿಸುವುದಾಗಿದೆ. ಸಭೆಯ ಬಗ್ಗೆ ಮಾತನಾಡುವಾಗ ನಾವು ಜಾಗರೂಕತೆಯಿಂದ ಇರೋಣ! ಅದನ್ನು ನಾವು ನಡಿಸಿಕೊಳ್ಳುವದರಲ್ಲಿ ಜಾಗರೂಕರಾಗಿರೋಣ.

## ಕ್ರೈಸ್ತರಿಗೆ ಕ್ರಿಸ್ತನ ಸಂಬಂಧ

ಬಹುಶಃ ಸಭೆಯ ವಿಷಯಕ್ಕಿಂತ ಬೇರೆ ಯಾವ ವಿಷಯವೂ ಹೆಚ್ಚು ತಪ್ಪು ತಿಳು ವಳಿಕೆಗೆ ಕಾರಣವಾಗಿರುವದಿಲ್ಲ. ಸಭೆಗೆ ಸಂಬಂಧಿಸಿದ ತಪ್ಪಾದ ವಿಚಾರಗಳು ಅದು ಏನಾಗಿದೆಯೆಂಬುದನ್ನು ತಿಳಿದುಕೊಳ್ಳದೇ ಹೋಗುವದರಿಂದ ಉದ್ಭವಿಸುತ್ತವೆ.

ಸಭೆಯ ಒಂದು ನಿರೂಪಣೆಯನ್ನು ಹುಡುಕೋಣ. ಅದು ಕ್ರಿಸ್ತನ ದೇಹವಾಗಿರುವುದು (ಎಫೆಸ 1:22, 23). ಅದು ಜನರ ಸಂಘಟನೆಯಾಗಿರುವುದು. ಆದರೆ ಯಾವ ಜನರು? ರಕ್ಷಿಸಲ್ಪಟ್ಟ ಜನರು (ಅಪೊಸ್ತಲರ ಕೃತ್ಯ 2:47). ಹೊಸ ಒಡಂಬಡಿಕೆಯ ಕ್ರೈಸ್ತರು ಹೀಗೆ ಸಭೆಯು ಕ್ರಿಸ್ತನು ಆಳಿಕೆ ಮಾಡುವ ರಕ್ಷಿಸಲ್ಪಟ್ಟ ಜನರಿಂದ ಮಾಡಲ್ಪಟ್ಟ ಸಂಘಟನೆಯಾಗಿದೆ. ಸಭೆಯ ನಿರೂಪಣೆಯೇ ಅದರ ಅವಶ್ಯಕತೆಯನ್ನು ಒತ್ತಿ

ಹೇಳುತ್ತದೆ.

ಸಭೆಯು ರಕ್ಷಿಸಬಲ್ಲದು ಎಂಬುದನ್ನು ಕೆಲವರು ನಂಬುವದಿಲ್ಲ. ಅವರು ಸರಿಯಾಗಿದ್ದಾರೆ ಅದು ರಕ್ಷಕನಾಗಿರವದಿಲ್ಲ; ಕ್ರಿಸ್ತನು ರಕ್ಷಕನಾಗಿದ್ದಾನೆ. ಆತನು ಮಾತ್ರವೇ ರಕ್ಷಿಸಬಲ್ಲನು. ಆತನು ಏನನ್ನು ರಕ್ಷಿಸುವನು? ದೇಹವನು (ಎಫೆಸ 5:23).

ಸಭೆಯ ಮಹತ್ವವನ್ನೂ ಸದಸ್ಯನಾಗಿರವವರ ಅಗತ್ಯತೆಗಳನ್ನು ಕುರಿತು ಇನ್ನೂ ತಪ್ಪು ತಿಳುವಳಿಕೆಯು ಕಂಡುಬರುವುದು. ಸಭೆಯ ಅವಶ್ಯಕತೆಯು, ಸಂಧಾನವು ದೇಹದಲ್ಲಿರುವುದು ಎಂದು ಪೌಲನ ಹೇಳಿಕೆಯಿಂದ ಕಂಡುಬರುವುದು (ಎಫೆಸ 2:16). ಹಾಗಿದ್ದರೆ ಸಭೆಯ ಹೊರಗೆ ಮನುಷ್ಯನು ದೇವರೊಂದಿಗೆ ಸಂಧಾನವಾಗಲಾರನು.

ದೇಹದ ಹೊರಗೆ ಜೀವವಿರುವದಿಲ್ಲ. ಶಿರಸ್ಸಿನೊಂದಿಗೆ ಐಕ್ಯವಾಗಿರಲು ಒಬ್ಬನು ದೇಹದಲ್ಲಿ ಇರಬೇಕು. ಯಾರೂ ಶಿರಸ್ಸಿನೊಂದಿಗೆ ಐಕ್ಯವಾಗಿದ್ದು ದೇಹದಿಂದ ಹೊರಗೆ ಉಳಿಯಲಾರನು. ಹೌದು, ಆತ್ಮೀಕ ಜೀವವಿರಲು ಒಬ್ಬನು ಸಭೆಯಲ್ಲಿ ಇರಬೇಕು. ರಕ್ಷಿಸಲ್ಪಡಲು ನೀವು ಸಭೆಯಲ್ಲಿ ಇರಬೇಕಾಗಿಲ್ಲ ಎಂಬ ಬೋಧನೆಯು ಸುಳ್ಳು ಬೋಧನೆಯಾಗಿದೆ.

## ಒಬ್ಬರೊಂದಿಗೊಬ್ಬರ ಕ್ರೈಸ್ತರ ಸಂಬಂಧ

ಅನೇಕ ಅಂಗಗಳಿರುವ ಮಾನವ ದೇಹದಂತೆ ಎಫೆಸ 4:16 ಸಭೆಯನ್ನು ಚಿತ್ರಿಸುತ್ತದೆ. ಪ್ರತಿಯೊಂದು ಅಂಗವು ಮಹತ್ವದ್ದು. ಅದಕ್ಕೆ ಮಾಡಲು ಕಾರ್ಯವಿದೆ ಎಂದು ರೂಪಕವು ತೋರಿಸುತ್ತದೆ. ಮಾನವ ದೇಹಕ್ಕೆ ಅನೇಕ ಭಾಗಗಳಿರುವಂತೆ ಪ್ರತಿಯೊಂದಕ್ಕೆ ಅದರದರ ಕಾರ್ಯವಿರುವುದು ಮತ್ತು ಎಲ್ಲವೂ ಇಡೀ ದೇಹಕ್ಕೆ ಸಹಾಯ ಮಾಡುವವು. ಆದುದರಿಂದ ಕ್ರಿಸ್ತನ ದೇಹಕ್ಕೆ ಒಳಪಟ್ಟ ನಮಗೆ ಭಿನ್ನವಾದ ಕಾರ್ಯಗಳಿದ್ದರೂ ಒಂದೇ ದೇಹಕ್ಕೆ ಒಳಪಟ್ಟಿರುತ್ತೇವೆ (1 ಕೊರಿಂಥ 12:25, 26). ಪ್ರತಿಯೊಂದು ಅದು ಹೊಂದಿಕೊಂಡ ಸ್ಥಳಕ್ಕೆ ಅಗತ್ಯವಾದದ್ದಾಗಿದೆ ಮತ್ತು ಇಡೀ ದೇಹಕ್ಕೆ ಪ್ರತಿಯೊಂದು ಅಂಗವು ಉಪಯುಕ್ತವಾದದ್ದಾಗಿದೆ. ಪ್ರತಿಯೊಬ್ಬನಿಗೆ ಇನ್ನೊಬ್ಬನ ಅಗತ್ಯತೆಯಿರುವದರಿಂದ, ಪ್ರತಿಯೊಬ್ಬನು ತನ್ನ ಕಾರ್ಯವನ್ನು ಮಾಡಬೇಕು; ತನ್ನನ್ನು ಹೆಚ್ಚಿಸಿಕೊಳ್ಳಬಹುದು ಇಲ್ಲವೇ ಇತರರನ್ನು ತೆಗಳಬಹುದು. ಸದಸ್ಯರ ಮಧ್ಯದಲ್ಲಿ ಗರ್ವವಾಗಲೀ ಮತ್ಸರವಾಗಲೀ ಇರತಕ್ಕದ್ದಲ್ಲ.

ದೇಹದ ಸದಸ್ಯರಿಗೆ ಒಬ್ಬರಿಗೊಬ್ಬರಿಗೆ ಸಹಾಯ ಮಾಡುವ ಆಸಕ್ತಿ ಮತ್ತು ಜೋಪಾಸನೆಯಿರಬೇಕು. ಒಬ್ಬನು ಕಷ್ಟಪಡುವಾಗ ಎಲ್ಲರೂ ಕಷ್ಟಪಡಬೇಕು. ದೇಹದ ಒಂದು ಭಾಗವು ರೋಗಗ್ರಸ್ತವಗುವಾಗ, ಇಡೀ ದೇಹವು ಅನಾನುಕೂಲತೆ ಹೊಂದುತ್ತದೆ. ಅದು ಸ್ವಸ್ಥತೆ ಹೊಂದುವಾಗ ಇತರ ಅಂಗಗಳ ಕಡೆಗೆ ಗಮನಿಸಬೇಕು. ಒಬ್ಬ ಸಹೋದರನು ಅಡ್ಡದಾರಿ ಹಿಡಿದು ಹೋಗುವಾಗ, ನಾವು ಅದರ ಬಗ್ಗೆ ಸುಮ್ಮನಿರಲಿಕ್ಕಾಗುವದಿಲ್ಲ. ಅದು ನಮಗೆ ಸಂಬಂಧಿಸಿದ್ದಿಲ್ಲವೆನ್ನುವ ರೀತಿಯಲ್ಲಿ ನಾವು ಮಾತಾಡತಕ್ಕದ್ದಲ್ಲ. ಇಡೀ ಸಭೆಯ ಜೋಪಾಸನೆ, ಉಪದೇಶ ಮತ್ತು ಪ್ರಾರ್ಥನೆಗಳು ತಪ್ಪುಮಾಡುವ ಸದಸ್ಯನ ಮೇಲೆ ಕೇಂದ್ರೀಕರಿಸಲ್ಪಡತಕ್ಕದ್ದು. ಒಬ್ಬ ಸದಸ್ಯನಿಗೆ ಕಷ್ಟವು ಬರವಾಗ, ಇತರರ ಸಹಾನುಭೂತಿಯು ಆ ಕಷ್ಟ ಪಡುವವರ ಮೇಲೆ ಹೋಗಬೇಕು. ಹಾಗೆಯೇ ಇನ್ನೊಬ್ಬನು ಆನಂದಿಸಲ್ಪಡುವಾಗ ನಾವೆಲ್ಲರೂ ಆನಂದಪಡಬೇಕು. ಇದು ಎಲ್ಲಾ ಮತ್ಸರವನ್ನು ತೆಗೆದು ಹಾಕುತ್ತದೆ. ಇನ್ನೊಬ್ಬ ಸದಸ್ಯನ ಒಳ್ಳೇ ಅವಕಾಶಕ್ಕಾಗಿ

ಇಲ್ಲವೇ ಯಶಸ್ಸಿಗಾಗಿ ಅಸಂತುಷ್ಟರಾಗಬಾರದು. ಒಂದೇ ದೇಹದ ಅಂಗಗಳಂತೆ ಲಕ್ಷಣತೋರಿಸಲು ಸಾಮೀಪ್ಯತೆಯನ್ನು, ಆಸಕ್ತಿಯ ಹೊಂದಾಣಿಕೆಯನ್ನು, ಆತ್ಮಗಳ ಪ್ರೀತಿಯನ್ನು ಮತ್ತು ಮನಸ್ಸಿನ ಏಕತೆಯನ್ನು ನಾವು ಅನುಭವಿಸುವೆವೋ?

## ಮುಕ್ತಾಯ

ಕ್ರಿಸ್ತನ ಸಭೆಗೂ ಅದರ ಸದಸ್ಯರಿಗೂ ಆತನ ಸಂಬಂಧವನ್ನು ಕುರಿತು ಮೂರು ಪಾಠಗಳು ಮುಖ್ಯವಾಗಿರತ್ತವೆ. ನಾವು ಕ್ರಿಸ್ತನ ದೇಹದಲ್ಲಿ, ಸಭೆಯಲ್ಲಿ ಇದ್ದರೆ ಕ್ರಿಸ್ತನು ನಮ್ಮ ಶಿರಸ್ಸಾಗಿರುವನು ಮತ್ತು ನಮ್ಮ ಜೀವಿತಗಳ ಕರ್ತನಾಗಿರುವನು. ಆತನೊಂದಿಗೆ ಐಕ್ಯವಾಗಿರಲು ನಾವು ಆತನ ದೇಹದಲ್ಲಿರತಕ್ಕದ್ದು. ಆ ದೇಹದ ಅಂಗಗಳಲ್ಲಿ ಐಕ್ಯತೆ ಮತ್ತು ಸಹಕಾರ ಇರತಕ್ಕದ್ದು. ಕ್ರಿಸ್ತನು ನಮ್ಮಲ್ಲಿರುವನು! ನಾವು ಕ್ರಿಸ್ತನಲ್ಲಿರುವೆವು! ನಾವು ಒಬ್ಬರಿಗೊಬ್ಬರು ಅಂಗಗಳಾಗಿದ್ದೇವೆ! ಕ್ರಿಸ್ತನ ದೇಹದಲ್ಲಿ ಇರುವದರ ಬಗ್ಗೆ ಈ ಹೇಳಿಕೆಗಳು ಸತ್ಯವಾಗಿರತಕ್ಕದ್ದು.

---

## ಇತರರನ್ನು ಒಡಂಬಡಿಸುವುದು ಹೇಗೆ

ನಾವು ತಿಳಿಯದೇ ಇತರರನ್ನು ಆಗಾಗ ಒಡಂಬಡಿಸುತ್ತೇವೆ. ಒಬ್ಬ ವ್ಯಕ್ತಿಯು ಕರ್ತನ ಆಹ್ವಾನಕ್ಕೆ ಉತ್ತರಕೊಟ್ಟು, ಇನ್ನೊಬ್ಬನು ಧೈರ್ಯಹೊಂದಿ ಉತ್ತರ ಕೊಡುವದಕ್ಕೆ ಕಾರಣವಾಗುವದನ್ನು ನಾನು ಆಗಾಗ ನೋಡಿದ್ದೇನೆ. ಮೊದಲನೆಯವನು ತಾನು ಇನ್ನೊಬ್ಬನು ಕ್ರೈಸ್ತನಾಗಲು ಸಹಾಯ ಮಾಡಿದ್ದೇನೆಂದು ಎಂದೂ ತಿಳಿಯಲಿಕ್ಕಿಲ್ಲ. ಬೇರೆ ಯಾವ ಮಾರ್ಗಗಳಿಂದ ನಾವು ಇತರರ ಮೇಲೆ ಪ್ರಭಾವ ಬೀರುತ್ತೇವೆ?

ನಮ್ಮ ಮಾತಿನಲ್ಲಿ. (ಓದಿರಿ 1 ತಿಮೊಥೆ 4:12; ಎಫೆಸ 4:29; ಕೊಲೊಸ್ಸೆ 4:6.) ನೀವು ಹೇಗೆ ಮಾತಾಡುವಿರಿ? ಜಾಗರೂಕತೆಯಿಲ್ಲದ ಮಾತಿಗೆ ಆತ್ಮಗಳ ಕ್ರಯ ಕೊಡಬೇಕು.

ನಮ್ಮ ಅನುದಿನದ ಜೀವನಗಳಲ್ಲಿ. ನಿಶ್ಚತವಾದ, ನಿಷ್ಠೆಯುಳ್ಳ ಕ್ರೈಸ್ತ ಜೀವಿತವು ಇತರರನ್ನು ಕ್ರಿಸ್ತನಿಗೆ ನಡಿಸಲು ಸಹಾಯ ಮಾಡುವುದು. ವ್ಯವಹಾರದ ಜನರಿಗೆ ತಮ್ಮ ಬೆಳಕುಗಳನ್ನು ಪ್ರಕಾಶಿಸಲು ಮಹಾ ಅವಕಾಶಗಳಿರುವವು. ಕ್ರೈಸ್ತ ಮಹಿಳೆಯರು ನಂಬಿಗಸ್ತ ನಡತೆಯಿಂದ ತಮ್ಮ ಗಂಡಂದಿರನ್ನು ಗೆಲ್ಲಬಹುದು (1 ಪೇತ್ರ 3:1).

ಸಭೆಯ ಕಡೆಗಿರುವ ನಮ್ಮ ಮನೋಭಾವನೆಗಳಿಂದ. ಇತರರಿಗೆ ಸಭೆಯು ಮಹತ್ವದ್ದೆಂದು ದೃಢಪಡಿಸುವದನ್ನು ನಾವು ನಿರೀಕ್ಷಿಸಿದರೆ, ಸಭೆಯು ನಮಗೆ ಮಹತ್ವವುಳ್ಳದ್ದೆಂದು ನಾವು ತೋರಿಸತಕ್ಕದ್ದು.

© 2009 Truth for Today